

ಫ್ರಾನ್ಸ್‌ನಲ್ಲಿ ನಡೆದ ಪ್ರದರ್ಶನದಲ್ಲಿ ಈ ಸೆಕ್ಸ್ ಟಾಯ್ 40,000 ಯೂರೋಗಳಿಗೆ ಮಾರಾಟವಾಯಿತು. ಅಬ್ಬಾ, ಆ ಹುಚ್ಚ ಯಾರು ಎಂದು ಮೂಗಿನ ಮೇಲೆ ಬೆರಳಿಡುವ ಮುನ್ನ ಸೂಕ್ಷ್ಮವಾಗಿ ಕಣ್ಣರಳಿಸಿ ನೋಡಿ. ಈ ಆಟಿಕೆಯ ಮಧ್ಯೆ 18 ಕ್ಯಾರೆಟ್ ವಜ್ರದುಂಗುರವಿದೆ. ಪ್ರೇಮ, ಕಾಮ ಎರಡೂ ಜೊತೆಜೊತೆಯಲ್ಲೇ... ಎನ್ನುವ ಸಂದೇಶವಂತೆ.

ಆಫ್ರಿಕಾ ಅರಣ್ಯವಾಸಿಗಳ ಕೈಯಲ್ಲಿ ಫೋರ್ಕ್ ಎಲ್ಲಿ ಬರಬೇಕು? ಆದರೆ ಸಿನಿಮಾ ಮಂದಿ ಏನು ಬೇಕಾದರೂ ಸೃಷ್ಟಿಸಿಬಿಡುತ್ತಾರೆ. ಆಫ್ರಿಕಾ ನೃತ್ಯದ ಆಲ್ಬಂ ಅನ್ನು ಹವಾನಾದಲ್ಲಿ ಚಿತ್ರೀಕರಿಸಲಾಗುತ್ತಿದ್ದು ಈ ಡಾನ್ಸರ್ ಫೋರ್ಕ್ ಅನ್ನೇ ಮೂಗಿನೊಳಗೆ ತೂರಿಸುತ್ತಿದ್ದಾನೆ.



ಅಮೆರಿಕದ 'ಮೀಸೆವಾಲಾ'ಗಳು ಸರ್ಕಾರ ತೆರಿಗೆ ವಿನಾಯ್ತಿ ನೀಡಬೇಕೆಂದು ಪಟ್ಟು ಹಿಡಿದಿದ್ದಾರೆ. ಅದೂ ತಲಾ 250 ಡಾಲರ್. ಶೇವಿಂಗ್ ಮಾಡದೇ ಸೇವಿಂಗ್ ಮಾಡಿದ್ದಕ್ಕೆ ಈ ತೆರಿಗೆ ಉಡುಗೊರೆ ಎಂದಿರಬಹುದು. ಆದರೆ ಈ ವಿನಾಯ್ತಿ ದುಡ್ಡು ಕೂಡಾ ಮೀಸೆವಾಲಾಗಳ ಕ್ಲಬ್‌ಗೆ ಹೋಗುವುದಂತೆ. ಮೀಸೆ ಗೊಬ್ಬರವಾದ ಕ್ರೀಂ, ಬಾಚಣಿಕೆ, ಕನ್ನಡಿ ಕೊಳ್ಳಲಂತೆ!

ಸ್ವಿಸ್ ವಾಚ್‌ಗಳೆಂದರೆ ಮೊದಲಿನಿಂದಲೂ ಜನಪ್ರಿಯವೇ. ಇದು ಇತ್ತೀಚಿನ ಖ್ಯಾತ ಸ್ವಿಸ್ ಡಿಸೈನರ್ ವಾಚ್ 'ಕೋಪ್ರೊಲೈಟ್'. ಕಣ್ಣಿಗೆ ಅಂದವಾಗಿ ಕಾಣುತ್ತಿಲ್ಲವಲ್ಲಾ ಎಂದು ಸುದ್ದಿಗೋಷ್ಠಿಯಲ್ಲಿ ಬಂದ ಟೀಕೆಗೆ 'ನೋಡಿದರೆ ಗೊತ್ತಾಗಲ್ಲ, ಮೂಸಿ ನೋಡಿ' ಎಂದನಂತೆ ಡಿಸೈನರ್. ಅಷ್ಟಕ್ಕೂ ಇವು ಪೆಡಂಭೂತಗಳ ಸೆಗಣಿಯಿಂದ ಮಾಡಿದ ವಾಚ್‌ಗಳಂತೆ! 'ಇಟ್ಟರೆ ಸೆಗಣಿಯಾದೆ, ಕಟ್ಟಿದರೆ ವಾಚಾದೆ...'



ರಿಯಲ್ ಎಸ್ಟೇಟ್ ದರವನ್ನು ಊಹಿಸುವುದೇ ಒಂದು ಜೂಜು. ಅಂಥದ್ದರಲ್ಲಿ ಸಿಡ್ನಿ ವಿವಿಯ ಪ್ರೊ. ಸ್ಟೀವ್ ಕೀನ್ ಆಸ್ಟ್ರೇಲಿಯಾದಲ್ಲಿ ಕಟ್ಟಡಗಳ ದರ ಕುಸಿಯುತ್ತದೆ, ಏರಿದರೆ ಶಿಖರವನ್ನು ಏರುವುದಾಗಿ ಬಾಜಿ ಕಟ್ಟಿದ. ಅದು ಎರಡು ವರ್ಷಗಳ ಹಿಂದೆ. ಅಲ್ಲಿ ಕಟ್ಟಡಗಳ ಬೆಲೆ ಶಿಖರದೆತ್ತರಕ್ಕೆ ಏರಿದ್ದು ಈಗ ಪ್ರೊಫೆಸರ್ ಮಹಾಶಯ 2228 ಮೀಟರ್ ಎತ್ತರದ ಮೌಂಟ್ ಕೋಸಿಯನ್ನು ಏರಲು ಶುರು ಮಾಡಿದ್ದಾನೆ. ದರ ಏರಿದರೆ, ಶಿಖರ ಇಳಿಯುವ ಬಾಜಿಯಾದರೂ ಕಟ್ಟಬಾರದಿತ್ತೇ?



ಜಾವಾ ದ್ವೀಪದ ಹಳೆಯ ಸಾಂಪ್ರದಾಯಿಕ ಚಾಕೊಲೇಟ್. ಖರ್ಚಿಲ್ಲ, ಕೊಬ್ಬೂ ಇಲ್ಲ. ಕಪ್ಪು ಮಣ್ಣು ಮೆದ್ದು ಹೊಸೆದರೆ ಚಾಕೊಲೇಟ್ ಸಿದ್ಧ. ಔಷಧ ಗುಣವಿದೆಯಾ ಎಂದರೆ ಅದೂ ಇಲ್ಲ. ಆದರೂ ತಿನ್ನುತ್ತಾರಂತೆ, ಬೆಂಗಳೂರಿನಲ್ಲಿ ರಬ್ಬರ್‌ನಂತೆ ಎಳೆದು ಬರುವ ಪಿಜ್ಜಾಗೆ ರುಚಿಯಿದೆಯಾ?



ಶಿರಡಿಯಲ್ಲಿ ಆರು ತಲೆಮಾರಿನವರು ವಿದೇಶೀಯರಿಗೆ ಕುತೂಹಲದ ಕೇಂದ್ರಬಿಂದು. ಹಿರಿಯಜ್ಜಿಗೆ 110, ಕಿರಿಯ ಸದಸ್ಯೆಗೆ 2 ವರ್ಷ. ಹಿರಿಯರೂ ಗಟ್ಟಿಮುಟ್ಟು. ತಿನ್ನುವ ಆಹಾರದ ರೆಸಿಪಿಗೆ ಈ ಬೇಡಿಕೆಯಂತೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65